7ನೇ ತರಗತಿ ಪರ್ಯಾಯ ಶೈಕ್ಷಣಿಕ ಯೋಜನೆ 2021–22 ದ್ವಿತೀಯ ಭಾಷೆ – ಕನ್ನಡ

ಡಿಸಂಬರ್ ಮಾಹೆ

| ಕ್ರ.ಸಂ | ತಿಂಗಳುವಾರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | **ಡಿಸಂಬರ್ ಮೊದಲನೇ ಮತ್ತು ಎರಡನೇ ವಾರ** | **ಪಾಠ–10 ದಾನಚಿಂತಾಮಣಿ ಅತ್ತಿಮಬ್ಬೆ** | | |
| | | • ಕರ್ನಾಟಕದ ಮಹಿಳಾ ಹೋರಾಟಗಾರರು ಹಾಗೂ ಲೇಖಕಿಯರನ್ನು ಪರಿಚಯಿಸುವುದು. | • ಶಿಕ್ಷಕರು ಮಹಿಳಾ ಹೋರಾಟಗಾರರು ಹಾಗೂ ಲೇಖಕಿಯರನ್ನು ಪರಿಚಯ ಮಾಡಿಕೊಡುವರು. | • ಮಹಾನ್ ಸಾಧಕರ ಸಾಧನೆಗಳನ್ನು ಹೇಳಿಸುವುದು. |
| | | • ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಹಾಗೂ ಲೇಖಕಿಯರಿಗೆ ನೀಡಿರುವ ಸ್ಥಾನ ಮಾನದ ಬಗ್ಗೆ ಅರಿಯುವುದು. | • ವಿದ್ಯಾರ್ಥಿಗಳಿಂದ ಆಯ್ದ ಮಹಿಳಾ ಹೋರಾಟಗಾರರು ಹಾಗೂ ಲೇಖಕಿಯರ ಸಾಧನೆಗಳನ್ನು ಕುರಿತು ನಿಯೋಜಿತ ಕಾರ್ಯ ಮಾಡಿಸುವರು. | • ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. |
| | | • ಅತ್ತಿಮಬ್ಬೆಯ ಬಾಲ್ಯ ಜೀವನವನ್ನು ಅರಿಯುವುದು. | • ಅತ್ತಿಮಬ್ಬೆಯ ಬಾಲ್ಯ ಜೀವನದ ಸ್ವಾರಸ್ಯಕರ ಘಟನೆಗಳನ್ನು ವಿದ್ಯಾರ್ಥಿಗಳಿಂದ ಪಟ್ಟಿ ಮಾಡಿಸುವರು. | • ಅತ್ತಿಮಬ್ಬೆಯ ಬಗೆಗೆ ವಿದ್ಯಾರ್ಥಿಗಳು ತಿಳಿದಿರುವ ವಿಷಯಗಳ ಬಗ್ಗೆ ಹೇಳಿಸುವುದು. |
| | | • ಅತ್ತಿಮಬ್ಬೆಯು ಜೈನ ಧರ್ಮದ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ತಿಳಿಯುವರು. | • ಅತ್ತಿಮಬ್ಬೆಯು ಜೈನಧರ್ಮದ ಪ್ರಚಾರಕ್ಕಾಗಿ ಮಾಡಿದ ಕಾರ್ಯಗಳನ್ನು ತಿಳಿಸಿ ಕ್ರಮಬದ್ಧವಾಗಿ ದಾಖಲಿಸುವರು. | • ಅಭ್ಯಾಸ ಹಾಳೆ –1 |
| | | • ಅತ್ತಿಮಬ್ಬೆಯ ಸಾಹಿತ್ಯಕ ಸೇವೆ ಮತ್ತು ಹಳಗನ್ನಡ ಮಹಾಕಾವ್ಯಗಳನ್ನು ಪ್ರಕಟಿಸುವಲ್ಲಿ ತೋರಿದ ಸಾಧನೆಯನ್ನು ಪರಿಚಯಿಸುವುದು. | • ಅತ್ತಿಮಬ್ಬೆಯ ಸಾಹಿತಿಕ ಸಾಧನೆ ಹಾಗೂ ಮಹಾಕಾವ್ಯಗಳನ್ನು ಹಸ್ತಪ್ರತಿ ಮಾಡಿಸಿ ದಾನ ನೀಡಿರುವುದರ ಬಗ್ಗೆ ತಿಳಿಸುವರು. | • ವಿದ್ಯಾಪೋಷಿತೆಯಾಗಿ ಅತ್ತಿಮಬ್ಬೆ ಮಾಡಿದ ಸಾಧನೆಗಳನ್ನು ಮಕ್ಕಳಿಂದ ಹೇಳಿಸುವುದು. |
| | | • ದಾನ ಚಿಂತಾಮಣಿ ಎಂಬ ಬಿರುದು ಬಂದಿರುವ ಬಗ್ಗೆ ಹೇಳುವುದು. | • ಅತ್ತಮಬ್ಬೆ ಮಾಡಿದ ದಾನದ ಮಹತ್ವವನ್ನು ಹೇಳಿ ಅವರ ಜೀವನದ ಸ್ವಾರಸ್ಯಕರ ಘಟನೆಗಳನ್ನು ದಾಖಲಿಸುವರು. | • ದಾನದ ಮಹತ್ವವನ್ನು ವಿದ್ಯಾರ್ಥಿಗಳು ಹೇಳುವರು. |
| | | • ಹಳಗನ್ನಡ ಕವಿಗಳ ಬಗೆಗೆ ತಿಳಿಯುವುದು. | • ಹಳಗನ್ನಡ ಕವಿಗಳ ಐತಿಹ್ಯ ಹಾಗೂ ಅವರ ಮಹಾಕಾವ್ಯಗಳನ್ನು ಪಟ್ಟಿ ಮಾಡಿಸುವರು. | • ಹಳಗನ್ನಡ ಕವಿಗಳ ಹೆಸರು ಮತ್ತು ಅವರ ಕೃತಿಗಳ ಬಗೆಗೆ ಪ್ರಶ್ನೆ |

| | | | | |
|---|---|---|---|---|
| | | • ಹೊಸಪದಗಳ ಪರಿಚಯ ಮಾಡಿಕೊಡುವುದು.<br>• ಲಿಂಗಗಳು ಮತ್ತು ವಚನಗಳ ಬಗ್ಗೆ ಅರಿಯುವರು.<br>• ಅತ್ತಿಮಬ್ಬೆಯ ಧರ್ಮಕಾರ್ಯಗಳು ಹಾಗೂ ಸಾಹಿತ್ಯ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ನೀಡಿದ ಗೌರವವನ್ನು ಅರಿಯುವುದು.<br>• ಅತ್ತಮಬ್ಬೆಯ ಜೀವನ ಮತ್ತು ಸಾಧನೆಯ ಸಾಕ್ಷ್ಯ ಚಿತ್ರ ರಚಿಸುವುದು.<br>• ವಾಕ್ಯರಚನಾ ಕೌಶಲ ಬೆಳೆಸುವುದು.<br>• ಬಿಡಿಸಿ ಬರೆಯುವುದನ್ನು ಅರಿಯುವರು. ಪಾಠದ ವಿವರಣೆಗಾಗಿ ಈ ಲಿಂಕ್ ಬಳಸಿ<br>**https://youtu.be/oGQGZ02zKMo** | • ಲಿಂಗಗಳು ಹಾಗೂ ವಚನಗಳನ್ನು ರೂಪ ಬದಲಿಸಿ ಬರೆಯುವುದನ್ನು ತಿಳಿಯುವರು.<br>• ಅತ್ತಿಮಬ್ಬೆಯ ಹೆಸರಿನಲ್ಲಿ ಮಹಿಳಾ ಸಾಹಿತಿಗಳಿಗೆ ಅತ್ತಿಮಬ್ಬೆ ಪ್ರಶಸ್ತಿ ನೀಡಿದೆ. ಆ ಮಹಿಳಾ ಸಾಹಿತಿಗಳ ಪಟ್ಟಿ ಮಾಡಿಸುವುದು.<br>• ಪಾಠದಲ್ಲಿರುವ ವಿಶೇಷ ಪದಗಳಿಗೆ ಟಿಪ್ಪಣಿ ರಚಿಸುವಂತೆ ಹೇಳುವುದು.<br>• ಸಾಕ್ಷ್ಯ ಚಿತ್ರವನ್ನು ರಚಿಸಲು ಮಾಹಿತಿ ಸಂಗ್ರಹಿಸಿ ಅಂತಿಮ ರೂಪಗೊಳಿಸುವರು.<br>• ಸ್ವಂತವಾಕ್ಯವನ್ನು ರಚಿಸುವರು.<br>• ಪತ್ಯದಲ್ಲಿ ಬಂದಿರುವ ಪದಗಳಿಗೆ ಬಿಡಿಸಿ ಬರೆಯುವುದನ್ನು ಕಲಿಯುವರು. | ಕೇಳಿ ಉತ್ತರ ಪಡೆಯುವರು.<br>• ಅಭ್ಯಾಸ ಹಾಳೆ–2<br>• ಅತ್ತಮಬ್ಬೆ ಪ್ರಶಸ್ತಿ ಪುರಸ್ಕೃತರನ್ನು ಹೇಳಿಸುವುದು.<br>• ಟಿಪ್ಪಣಿಗಳನ್ನು ರಚಿಸುವಂತೆ ಹೇಳಿ ತಪ್ಪುಗಳನ್ನು ಸರಿಪಡಿಸುವುದು.<br>• ಸಾಕ್ಷ್ಯಚಿತ್ರ ತೋರಿಸಿ ಪ್ರಶ್ನೆ ಕೇಳಿ ಉತ್ತರ ಪಡೆಯುವರು.<br>• ಅಭ್ಯಾಸ ಹಾಳೆ–3 |

| | | | | |
|---|---|---|---|---|
| **02** | ಮೂರನೇ ವಾರ | **ಪಾಠ–11**<br>**ಈ ನೆಲ ಈ ಜಲ**<br><br>* ಕವಿ ಪರಿಚಯ :<br>ಎಚ್. ಡುಂಡಿರಾಜ್<br>ಕವಿ ಎಚ್. ಡುಂಡಿರಾಜ್ ರವರ ಪರಿಚಯವನ್ನು ಮಾಡಿಕೊಡುವರು<br><br>* ಸ್ವರಭಾರಕ್ಕನುಗುಣವಾಗಿ, ರಾಗಬದ್ದವಾಗಿ ಪದ್ಯ | * ಶಿಕ್ಷಕರು ಕವಿ ಪರಿಚಯವನ್ನು ಮಡಿಕೊಡುವರು.<br><br>* ಕವಿ ಎಚ್. ಡುಂಡಿರಾಜ್ ರವರು ರಚಿಸಿರುವ ಕೃತಿಗಳನ್ನು ಪಟ್ಟಿ ಮಾಡಿಸುವರು.<br><br>* ಶಿಕ್ಷಕರು ಪದ್ಯದ ಮದರಿ ವಾಚನ ಮಾಡಿ | * ಕವಿಯ ಬಗ್ಗೆ ಮಾತನಾಡಲು ತಿಳಿಸುವುದು |

| | | | | |
|---|---|---|---|---|
| | | ಹಾಡುವುದನ್ನು ಕಲಿಯುವರು<br><br>* ಮಕ್ಕಳಲ್ಲಿ ಪರಿಸರದ ಬಗೆಗೆ ಕಾಳಜಿಯನ್ನುಂಟು ಮಾಡುವುದು.<br><br>* ಪ್ರಕೃತಿ ಕೊಟ್ಟ ಕೊಡುಗೆಗಳನ್ನು ಪಟ್ಟಿ ಮಾಡುವುದು<br><br>* ನೀರು ಮತ್ತು ಗಾಳಿ ಮಲಿನವಾಗುವ ಸಂದರ್ಭವನ್ನು ವಿವರಿಸುವುದು.<br>* ಅರಣ್ಯ ನಾಶದ ಪರಿಣಾಮಗಳನ್ನು ವಿವರಿಸುವುದು.<br><br>* ನೆಲ ಜಲ ರಕ್ಷಣೆಯಿಂದಾಗುವ ಪ್ರಯೋಜನಗಳನ್ನು ಪಟ್ಟಿ ಮಾಡುವುದು.<br><br>* ಅನುಕರಣಾ ಅವ್ಯಯ ಪದಗಳು ಮತ್ತು ದ್ವಿರುಕ್ತಿ ಪದಗಳಿಗಿರುವ ವ್ಯತ್ಯಾಸವನ್ನು ತಿಳಿಯುವರು.<br><br>*ಪರಿಸರ ಸಂರಕ್ಷಣೆಯ ಘೋಷವಾಕ್ಯಗಳನ್ನು ಹೇಳುವುದು<br><br>ಪಾಠದ ವಿವರಣೆಗಾಗಿ ಈ ಲಿಂಕ್ ಬಳಸಿ<br>https://youtu.be/bfjqoPJD5ec | ಮಕ್ಕಳಿಂದ ವಾಚನ ಮಾಡಿಸುವರು.<br><br>* ಪದ್ಯ ಆಶಯವನ್ನು ಹೇಳಿಸುವುದರ ಮೂಲಕ ಸಾರಾಂಶವನ್ನು ಬರೆಸುವರು.<br><br>* ಪ್ರಕೃತಿ ಕೊಟ್ಟಿರುವ ಕೊಡುಗೆಗಳನ್ನು ಉದಾಹರಣೆ ಸಹಿತ ವಿವರಿಸುವರು.<br><br>* ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾಗುವ ಘಟನೆಗಳನ್ನು ವಿಡಿಯೋ ಮೂಲಕ ವಿವರಿಸುವರು.<br>* ಅರಣ್ಯ ನಾಶದ ಪರಿಣಾಮಗಳನ್ನು ಚಿತ್ರಪಟ ಸಹಿತ ವಿವರಿಸುವುದು.<br><br>* ಪರಿಸರ ಸಂರಕ್ಷಣೆಯಿಂದಾಗುವ ಪ್ರಯೋಜನಗಳನ್ನು ಮಕ್ಕಳಿಂದ ಹೇಳಿಸುವರು.<br><br>* ಅನುಕರಣಾ ಅವ್ಯಯ ಹಾಗೂ ದ್ವಿರುಕ್ತಿಗಿರುವ ವ್ಯತ್ಯಾಸ ಮತ್ತು ಅರ್ಥವನ್ನು ಉದಾಹರಣೆ ಸಹಿತ ವಿವರಿಸುವರು.<br><br>* ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಘೋಷವಾಕ್ಯಗಳನ್ನು ಹೇಳಿಸಿ ಬರೆಸುವುದು. | * ಪದ್ಯದ ಪದಗಳು ಮತ್ತು ಸಾಲುಗಳನ್ನು ಕಂಠಪಾಠ ಮಾಡಿರುವುದನ್ನು ಹೇಳಿಸುವುದು.<br><br>ಅಭ್ಯಾಸ ಹಾಳೆ – 4<br><br>* ಪ್ರಕೃತಿ ಕೊಟ್ಟಿರುವ ಕೊಡುಗೆಗಳನ್ನು ಪಟ್ಟಿ ಮಾಡಿಸುವುದು.<br><br>* ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯದ ಕಾರಣಗಳನ್ನು ಹೇಳಿಸುವುದು.<br><br>* ಅರಣ್ಯ ನಾಶದ ಪರಿಣಾಮಗಳನ್ನು ಹೇಳಿಸುವುದು.<br><br>* ಪರಿಸರ ಸಂರಕ್ಷಣೆಯಿಂದಾಗುವ ಪ್ರಯೋಜನಗಳನ್ನು ಹೇಳಿಸುವುದು.<br><br>ಅಭ್ಯಾಸ ಹಾಳೆ – 5 |
| | ನಾಲ್ಕನೇ ವಾರ | **ಜಾತ್ರೆಯಲ್ಲಿ ಒಂದು ಸುತ್ತು**<br><br>* ಗ್ರಾಮೀಣ ಬದುಕಿನ ಉತ್ಸವಗಳು, ಹಬ್ಬ ಹರಿದಿನಗಳ ಬಗ್ಗೆ ತಿಳಿಯುವುದು.<br>* ಪೂರ್ವಿಕರು ಆಚರಿಸಿಕೊಂಡು ಬಂದಿರುವ ಪರಂಪರೆ | ಗ್ರಾಮೀಣ ಬದುಕಿನ ಜೀವನ ಮತ್ತು ಅವರು | * ಕೆಲವು ಪ್ರಶ್ನೆಗಳನ್ನು ನೀಡಿ ಉತ್ತರ ಪಡೆಯುವುದು |

| | | | | |
|---|---|---|---|---|
| | | ಬಗ್ಗೆ ಅರಿಯುವುದು.<br><br>* ಉತ್ಸವ ಮತ್ತು ಹಬ್ಬ ಹರಿದಿನಗಳಲ್ಲಿ ನಡೆಯುವ ಜಾತ್ರೆಯ ಮಹತ್ವವನ್ನು ಅರಿಯುವುದು.<br><br>* ಜಾತ್ರೆಯ ವಿಶೇಷತೆಗಳನ್ನು ಅರಿಯುವುದು.<br><br>* ಜಾತ್ರೆ ನಡೆಯುವಾಗ ಮಕ್ಕಳಲ್ಲಿ ಆಸಕ್ತಿ ಇಮ್ಮಡಿಯಾಗುವುದರ ಕಾರಣಗಳನ್ನು ಅರಿಯುವುದು .<br><br>* ಜಾತ್ರೆಯಲ್ಲಿ ನಡೆಯುವ ಆಟೋಟಗಳ ಬಗ್ಗೆ ತಿಳಿಯುವುದು .<br><br>* ಜಾತ್ರೆಯಲ್ಲಿ ಪ್ರದರ್ಶನವಾಗುವ ಜಾನಪದ ನೃತ್ಯಗಳ ಬಗ್ಗೆ ತಿಳಿಯುವುದು.<br>* ಮಕ್ಕಳ ಸಡಗರಕ್ಕೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡುವುದು.<br><br>* ಹೊಸ ಪದಗಳ ಪರಿಚಯ ಮಾಡಿಕೊಡುವುದು.<br><br>* ವಿಶೇಷ ಪದಗಳಿಗೆ ಟಿಪ್ಪಣಿ ಬರೆಯುವ ಸಾಮರ್ಥ್ಯ ಬೆಳೆಸುವುದು.<br><br>* ವಾಕ್ಯ ರಚನಾ ಕೌಶಲ ಬೆಳೆಸುವುದು.<br><br>* ಪದ ಬಿಡಿಸಿ ಓದುವುದು ಮತ್ತು ಬರೆಯುವುದನ್ನು ಕಲಿಯುವರು .<br>ಪಾಠದ ವಿವರಣೆಗಾಗಿ ಈ ಲಿಂಕ್ ಬಳಸಿ<br>https://youtube.com/watch?v=YdkNGGo5g-Y&feature=share | ಆಚಸಿಸುವ ಆಚರಣೆಗಳ ಬಗ್ಗೆ ವಿವರಿಸುವರು<br><br>* ಜಾತ್ರೆಯ ವಿಶೇಷತೆಗಳ ಬಗ್ಗೆ ಮಕ್ಕಳಿಗಿರುವ ಅರಿವಿನ ವಿಚಾರಗಳನ್ನು ತಿಳಿಸುವುದು<br><br>*ಜಾತ್ರೆಗೆ ಸಂಬಂಧಿಸಿದ ಸಾಕ್ಷಚಿತ್ರ ತಯಾರಿಸಲು ಬೇಕಾಗುವ ಮಾಹಿತಿ ಮತ್ತು ಸಾಮಗ್ರಿಗಳನ್ನು ಸಂಗ್ರಹಿಸುವುದು.<br>* ಸ್ಥಳೀಯವಾಗಿ ಆಚರಿಸಲ್ಪಡುವ ಜಾತ್ರೆಗೆ ಭೇಟಿ ನೀಡುವುದು.<br><br>* ಜಾತ್ರೆಗೆ ಸಂಬಂಧಿಸಿದ ಐತಿಹ್ಯವನ್ನು ಹೇಳುವುದು.<br><br>* ಜೋಕಾಲಿ, ತೂಗುತೊಟ್ಟಿಲು, ಜಾರುಬಂಡಿ– ಇವುಗಳ ಬಗ್ಗೆ ಹೇಳುವುದು.<br><br>* ಕಂಸಾಳೆ, ಬಯಲಾಟ,ವೀರಗಾಸೆ,ನಂದಿಧ್ವಜ, ಯಕ್ಷಗಾನ, ಹಾಲಕ್ಕಿ ಕುಣಿತ,ದೊಂಬರಾಟ– ಈ ಜಾನಪದ ನೃತ್ಯಗಳನ್ನು ಅಭಿನಯ ಮಾಡಿಸುವುದು<br><br>* ಪಠ್ಯದಲ್ಲಿ ಬರುವ ಹೊಸ ಪದಗಳ ಅರ್ಥವನ್ನು ಹೇಳಿಸುವುದು.<br><br>* ವಿಶೇಷ ಪದಗಳನ್ನು ನೀಡಿ ಟಿಪ್ಪಣಿ ಬರೆಸುವುದು.<br><br>* ಪಠ್ಯದಲ್ಲಿ ಬರುವ ವಿರುದ್ಧ ಪದ ಬರೆಸಿ ನಂತರ ಅರ್ಥವನ್ನು ಹೇಳಿಸುವುದು.<br><br>* ಪದ ವಿಂಗಡಣೆ ಮಾಡಿ ಪದ ಜೋಡಿಸಿ ಬರೆಯುವುದನ್ನು ಅಭ್ಯಾಸ ಮಾಡಿಸುವುದು. | * ಜಾತ್ರೆಯ ವಿಶೇಷತೆಯ ಬಗ್ಗೆ ಹೇಳಿಸುವುದು<br><br>* ಸಾಕ್ಷಚಿತ್ರದ ಬಗ್ಗೆ ಮಾತನಾಡಿಸುವುದು<br><br>ಅಭ್ಯಾಸ ಹಾಳೆ – 6<br><br>* ಜಾತ್ರೆಯ ಐತಿಹ್ಯದ ಬಗ್ಗೆ ಮಾತನಾಡಿಸುವುದು<br><br>* ಜಾತ್ರೆಯಲ್ಲಿ ನಡೆಯುವ ಆಟೋಟಗಳ ಬಗ್ಗೆ ಮಾತನಾಡಿಸುವುದು<br>* ಜಾನಪದ ನೃತ್ಯಗಳ ಅಭಿನಯ ಮಾಡಿಸುವುಸದು<br><br>* ಹೊಸ ಪದಗಳನ್ನು ಹೇಳಿಸುವುದು<br><br>* ಅಭ್ಯಾಸ ಹಾಳೆ– 7<br><br>* ಸ್ವಂತ ವಾಕ್ಯ ಬರೆಸುವುದು.<br><br>* ಪದ ಜೋಡಿಸಿ ಬರೆಸುವುದು. |

# ಅಭ್ಯಾಸ ಹಾಳೆ–1

7ನೇ ತರಗತಿ | ದಾನಚಿಂತಾಮಣಿ ಅತ್ತಿಮಬ್ಬೆ | ದ್ವಿತೀಯ ಭಾಷೆ ಕನ್ನಡ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ:

1. ಅತ್ತಿ ಮಬ್ಬೆಯ ತಂದೆ ತಾಯಿಯ ಹೆಸರೇನು ?

___________________________________________

2. ಅತ್ತಿಮಬ್ಬೆಯ ಹುಟ್ಟೂರು ಯಾವುದು ?

___________________________________________

3. ಅತ್ತಿ ಮಬ್ಬೆಯ ಮೇಲಿನ ಅಭಿಮಾನವನ್ನು ರನ್ನ ಹೇಗೆ ತೋರಿದ್ದಾನೆ ?

___________________________________________

4. ಬಾಲಕಿ ಅತ್ತಿಮಬ್ಬೆಯಲ್ಲಿದ್ದ ಗುಣಗಳಾವುವು ?

___________________________________________

5. ಅತ್ತಿಮಬ್ಬೆ ಪ್ರಶಸ್ತಿಯನ್ನು ಯಾರಿಗೆ ನೀಡಲಾಗುತ್ತದೆ ?

___________________________________________

6. ಅತ್ತಿಮಬ್ಬೆಯು ತನ್ನ ಬಿಡುವಿನ ವೇಳೆಯಲ್ಲಿ ಯಾವ ಕೆಲಸ ಮಾಡುತ್ತಿದ್ದಳು ?

___________________________________________

___________________________________________

___________________________________________

7. ಅತ್ತಿಮಬ್ಬೆ ವಿದ್ಯಾಪೋಷಿತೆಯಾಗಿ ಮಾಡಿದ ಕಾರ್ಯಗಳೇನು ?

___________________________________________

___________________________________________

___________________________________________

## ಅಭ್ಯಾಸ ಹಾಳೆ–2

7ನೇ ತರಗತಿ　　ದಾನಚಿಂತಾಮಣಿ ಅತ್ತಿಮಬ್ಬೆ　　ದ್ವಿತೀಯ ಭಾಷೆ ಕನ್ನಡ

ಅ. ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ:–

1. ಅನುಪಮ = ____________________________

2. ಜಿನ = ____________________________

3. ಮಿತ್ರ = ____________________________

4. ಸನ್ನಡತೆ = ____________________________

5. ಈಡೇರು = ____________________________

ಆ. ಈ ಕೆಳಗಿನ ಪದಗಳಿಗೆ ಅನ್ಯಲಿಂಗರೂಪ ಬರೆಯಿರಿ:

1. ಧರ್ಮಿಷ್ಠೆ – ____________________________

2. ಚತುರ – ____________________________

3. ದಾನಶೂರ – ____________________________

4. ದಯಾಶೀಲೆ – ____________________________

5. ಕವಿ – ____________________________

ಇ. ಹೊಂದಿಸಿ ಬರೆಯಿರಿ:–

1. ಆದಿಪುರಾಣ – (ಅ) ಅತ್ತಿಮಬ್ಬೆ – ____________________________

2. ಶಾಂತಿಪುರಾಣ – (ಆ) ಲಕ್ಕುಂಡಿ – ____________________________

3. ಸಾಹಸಭೀಮ ವಿಜಯಂ – (ಇ) ಪೊನ್ನಕವಿ – ____________________________

4. ದಾನಚಿಂತಾಮಣಿ – (ಈ) ಪಂಪಕವಿ – ____________________________

– (ಉ) ರನ್ನಕವಿ – ____________________________

## ಅಭ್ಯಾಸ ಹಾಳೆ–3

7ನೇ ತರಗತಿ ದಾನಚಿಂತಾಮಣಿ ಅತ್ತಿಮಬ್ಬೆ ದ್ವಿತೀಯ ಭಾಷೆ ಕನ್ನಡ

ಅ. ಈ ಕೆಳಗಿನ ಪದಗಳಿಗೆ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ:

1. ಸನ್ನಡತೆ = ______________________________
2. ಸಂಸ್ಕಾರ = ______________________________
3. ವಿವೇಕ = ______________________________
4. ವಿನಯ = ______________________________
5. ಅನುಪಮ = ______________________________

ಆ. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ :

1. ವಿದ್ಯಾಭ್ಯಾಸ = ____________ + ____________
2. ಜಿನಾಲಯ = ____________ + ____________
3. ಸಾಹಿತ್ಯಾಭಿಮಾನಿ = ____________ + ____________
4. ವೀರಾವೇಶ = ____________ + ____________
5. ಬಿರುದಾಂಕಿತ = ____________ + ____________

ಇ. ವಾಕ್ಯದಲ್ಲಿರುವ ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ.

1. ಅತ್ತಿಮಬ್ಬೆ ನೆಲೆಸಿದಳು ಲಕ್ಕುಂಡಿಯಲ್ಲಿ ಮಗನೊಂದಿಗೆ

______________________________

2. ರಣರಂಗದಲ್ಲಿ ರಥಸಾರಥಿಯಾಗಿ ನಡೆಸುತ್ತಿದ್ದಳು ಅತ್ತಿಮಬ್ಬೆ

______________________________

3. ಮರಣಾನಂತರ ನಾಗದೇವನ ವೈರಾಗ್ಯ ಅತ್ತಿಮಬ್ಬೆ ತಾಳಿದಳು

______________________________

ಈ. ಖಾಲಿ ಬಿಟ್ಟಿರುವ ಸ್ಥಳದಲ್ಲಿ ಪದವನ್ನು ಬರೆದು ವಾಕ್ಯವನ್ನು ಪೂರ್ಣಗೊಳಿಸಿರಿ.

1. ಅತ್ತಿಮಬ್ಬೆಯ ಗುರುಗಳ ಹೆಸರು ____________
2. ರನ್ನನ ಗುರುಗಳ ಹೆಸರು ____________
3. ಅತ್ತಿಮಬ್ಬೆಯ ಮಗನ ಹೆಸರು ____________
4. ರನ್ನನಿಗೆ ನೀಡಿದ ಬಿರುದು ____________

7ನೇ ತರಗತಿ ಅಭ್ಯಾಸ ಹಾಳೆ – 4 ದ್ವಿತೀಯ ಭಾಷೆ ಕನ್ನಡ

## ಈ ನೆಲ ಈ ಜಲ

**I. ಕೆಳಗಿನ ಪ್ರಶ್ನೆಗಳಿ ಉತ್ತರ ಹೇಳಿ ಬರೆಯಿರಿ :**

1. ನಮಗೆ ಪ್ರಕೃತಿ ಕೊಟ್ಟ ಕೊಡುಗೆಗಳು ಯಾವುವು ?

______________________________________________

2. ಹೊಳೆಯ ನೀರು ಮಲಿನಗೊಳ್ಳಲು ಕಾರಣವೇನು?

______________________________________________

3. ಗಾಳಿಯನ್ನು ಹೇಗೆ ಮಲಿನಗೊಳಿಸುತ್ತಿದ್ದೇವೆ ?

______________________________________________

4. ನಾವು ಯಾರಿಗಾಗಿ ನೆಲ ಜಲಗಳನ್ನು ರಕ್ಷಿಸಬೇಕು ?

______________________________________________

5. ಚಿಲಿಪಿಲಿ ಉಲಿವ ಹಕ್ಕಿಗಳು ಏಕೆ ಬಿಕ್ಕಿ ಬಿಕ್ಕಿ ಅಳುತ್ತಿವೆ ?

______________________________________________

______________________________________________

6. ಕರುನಾಡ ಚೆಲುವನ್ನು ಹೇಗೆ ರಕ್ಷಿಸಬೇಕೆಂದು ಕವಿ ಆಶಿಸುತ್ತಾರೆ ?

______________________________________________

______________________________________________

______________________________________________

7. ನೆಲ ಜಲಗಳನ್ನು ರಕ್ಷಿಸುವುದರಿಂದಾಗುವ ಪ್ರಯೋಜನಗಳೇನು ?

______________________________________________

______________________________________________

______________________________________________

7ನೇ ತರಗತಿ　　　　　ಅಭ್ಯಾಸ ಹಾಳೆ – 4　　　　　ದ್ವಿತೀಯ ಭಾಷೆ ಕನ್ನಡ

ಈ ನೆಲ ಈ ಜಲ

**I. ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ :**

| | |
|---|---|
| ಉಲಿ | |
| ಚಲುವು | |
| ಖಳ | |
| ಸಿರಿ | |

**II. ಕೆಳಗಿನ ಪದಗಳನ್ನು ದ್ವಿರುಕ್ತಿ, ಅನುಕರಣಾವ್ಯಯಗಳಾಗಿ ವಿಂಗಡಿಸಿ ಬರೆಯಿರಿ:**

**ಜುಳು ಜುಳು, ಸಾಕು ಸಾಕು, ಕಡಿದು ಕಡಿದು, ಚಿಲಿಪಿಲಿ, ಸರ ಸರ, ಬಗೆ ಬಗೆ,**

**ಪಟಪಟ, ಹೋಗು ಹೋಗು, ಚಚ್ಚಿ ಚಚ್ಚಿ, ಬಿಕ್ಕಿ ಬಿಕ್ಕಿ. ನಿಲ್ಲುನಿಲ್ಲು**

| ದ್ವಿರುಕ್ತಿ | ಅನುಕರಣಾವ್ಯಯ |
|---|---|
| | |
| | |
| | |
| | |
| | |
| | |

**III. ಕೆಳಗಿನ ವಾಕ್ಯಗಳನ್ನು ಪೂರ್ಣಗೊಳಿಸಿರಿ :**

1. ಪರಿಸರ ಸಂರಕ್ಷಣೆ ನಮ್ಮೆಲ್ಲರ ______________________________

2.. ಕಾಡು ಬೆಳೆಸಿ ನಾಡು ___________________________

3. ಮನೆಗೊಂದು ಮರ ಊರಿಗೊಂದು _________________

4. ಅರಣ್ಯದ ನಾಶ ಮನುಕುಲದ _____________________

# ಅಭ್ಯಾಸ ಹಾಳೆ–6

7ನೇ ತರಗತಿ ಜಾತ್ರೆಯಲ್ಲಿ ಒಂದು ಸುತ್ತು ದ್ವಿತೀಯ ಭಾಷೆ ಕನ್ನಡ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ

1 ಜಾತ್ರೆಯಲ್ಲಿನ ಅಂಗಡಿಗಳನ್ನು ನೋಡಿ ವೇಣು ಏನೆಂದು ಆಶ್ಚರ್ಯ ವ್ಯಕ್ತಪಡಿಸಿದನು ?

______________________________________________________________________

2 ದೊಂಬರಾಟದ ಹುಡುಗಿ ಯಾವ ಸಾಹಸ ಮಾಡುತ್ತಿದ್ದಳು ?

______________________________________________________________________

3 ದೊಂಬರಾಟದ ಹುಡುಗಿಯನ್ನು ಕಂಡ ರಶ್ಮಿಗೆ ಕಾಡಿದ ಪ್ರಶ್ನೆಗಳೇನು ?

______________________________________________________________________

4 ಅಜ್ಜನು ವೇದಿಕೆ ಮೇಲೆ ಯಾವ ಯಾವ ಕಾರ್ಯಕ್ರಮಗಳು ನಡೆಯುತ್ತವೆಂದು ಹೇಳಿದನು ?

______________________________________________________________________

5 ಜಾತ್ರೆಯಲ್ಲಿ ತೆರೆದಿಟ್ಟ ಪದಾರ್ಥಗಳನ್ನು ತಿನ್ನಬಾರದು ಏಕೆ ?

______________________________________________________________________

6 ರಥದ ನಿರ್ಮಾಣದ ಬಗ್ಗೆ ಇರ್ಫಾನ್ ಏನೆಂದು ಹೇಳಿದನು ?

______________________________________________________________________

______________________________________________________________________

______________________________________________________________________

7 ರಥದ ಮುಂದೆ ಸಾಗಿದ ಕಲಾ ತಂಡಗಳು ಯಾವುವು ?

______________________________________________________________________

______________________________________________________________________

______________________________________________________________________

**ಅಭ್ಯಾಸ ಹಾಳೆ–7**

**7ನೇ ತರಗತಿ** **ಜಾತ್ರೆಯಲ್ಲಿ ಒಂದು ಸುತ್ತು** **ದ್ವಿತೀಯ ಭಾಷೆ ಕನ್ನಡ**

**I.ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ**

1 .ಕುಶಲತೆ = ______________________________

2 .ನಿರ್ಮಿಸು= ______________________________

3 .ಸೊಗಸು = ______________________________

4 .ಸಮೂಹ = ______________________________

5. ಕಾಯ್ದೆ = ______________________________

**II.ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ**

1. ಆಕರ್ಷಿಸು – ________________________________________________________________

2. ವೀಕ್ಷಿಸು – ________________________________________________________________

3 .ಕುತೂಹಲ – ________________________________________________________________

**III.ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ**

1.ಅನುಕೂಲ X ___________________________

2 .ಸಮತೋಲನ X ___________________________

3 .ಆಧಾರ X ___________________________

4 .ಸನಿಹ X ___________________________

5. ದೈರ್ಯ X ___________________________

**IV.ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ**

1. ಓಡಾಟ = _________________ + ____________________

2 .ಬಯಲಾಟ = _________________ + ____________________

3. ಹರ್ಷೋದ್ಗಾರ = _________________ + ____________________

4 .ದೊಂಬರಾಟ = _________________ + ____________________